ಯೋಜನೆ ಮತ್ತು ಯೋಜನೇತರ ಕಾಮಗಾರಿಗಳು

1007(794); ಶ್ರೀ ಮಾನಪ್ಪ ಡಿ. ವಜ್ಜಲ್

ಅ) ರಾಯಚೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಕೈಗೊಂಡಿರುವ ಯೋಜನೆ ಹಾಗೂ ಯೋಜನೇತರ ಕಾಮಗಾರಿಗಳು ಯಾವುವು; (ವಿವರ ನೀಡುವುದು)

ಆ) ಈ ಯೋಜನೆಗಳಿಗೆ ಬಿಡುಗಡೆಗೊಳಿಸಿರುವ ಅನುದಾನವೆಷ್ಟು; ಕೈಗೊಂಡಿರುವ ಕಾಮಗಾರಿಗಳ ಸ್ಥಿತಿಗತಿಗಳ ಪೂರ್ಣ ಮಾಹಿತಿಯನ್ನು ಕ್ಷೇತ್ರವಾರು ಒದಗಿಸುವುದು?

ಶ್ರೀ ಶಿವರಾಜ ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) 2015–16ನೇ ಸಾಲಿನ ಕ್ರಿಯಾಯೋಜನೆ ಪರಿಶೀಲನೆಯಲ್ಲಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಸಂಘಟಿಕ ಕಾರ್ಮಿಕರ ಅಭಿವೃದ್ಧಿ

1008(1217); ಶ್ರೀ ಮಂಜುನಾಥ್ .ಹೆಚ್.ಪಿ. (ಹುಣಸೂರು)

ಅ) ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಅಭಿವೃದ್ಧಿಗಾಗಿ ಕಾರ್ಮಿಕ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ಯೋಜನೆಗಳು ಯಾವುವು;

ಆ) ಮಂಡಳಿ ಯೋಜನೆಗಳಾದ ಎನ್.ಪಿ.ಎಸ್. ಸ್ವಾವಲಂಬನಾ, ಇತರೆ ಯೋಜನೆಗಳನ್ನು ಅನುಷ್ಠಾನಗೊಳಿಸುವ ಹಾಗೂ ಕಾರ್ಮಿಕರ ನೋಂದಣಿ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಖಾಸಗಿ ಸಂಸ್ಥೆಗಳನ್ನು ಫೆಸಿಲಿಟೇಟರ್ ಸಂಸ್ಥೆಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿರುವುದೇ;

ಇ) ಹಾಗಿದ್ದಲ್ಲಿ, ಅಂತಹ ಸಂಸ್ಥೆಗಳು ಯಾವುವು; (ವಿವರ ನೀಡುವುದು);

ಈ) ಫೆಸಿಲಿಟೇಟರ್ ಸಂಸ್ಥೆಗಳ ನೇಮಕಕ್ಕೆ ಇರುವ ಷರತ್ತುಗಳೇನು ಅಥವಾ ಯಾವ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ, ನೋಂದಣಿ ಹಾಗೂ ಯೋಜನೆಯ ಅರಿವು ಮೂಡಿಸಲು ಸಂಸ್ಥೆಗೆ ಮಂಡಳಿ ವತಿಯಿಂದ ನೀಡುವ ಕಮಿಷನ್/ ಗೌರವಧನ/ಅನುದಾನ ಎಷ್ಟು;

ಉ) ರಾಜ್ಯದಲ್ಲಿ ವಿವಿಧ ಯೋಜನೆಗಳಡಿ ಈವರೆವಿಗೂ ಮಂಡಳಿಗೆ ನೋಂದಣಿಯಾದ ಸದಸ್ಯರ ಸಂಖ್ಯೆ ಎಷ್ಟು; ಈ ಪೈಕಿ ಫೆಸಿಲಿಟೇಟರ್ ಸಂಸ್ಥೆ ವತಿಯಿಂದ ನೋಂದಣಿಯಾದ ಸದಸ್ಯರ ಸಂಖ್ಯೆ ಎಷ್ಟು; (ವಿವರ ನೀಡುವುದು)?

ಶ್ರೀ ಪಿ.ಟಿ. ಪರಮೇಶ್ವರ ನಾಯಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಇಲಾಖೆಯ ಅಧೀನದಲ್ಲಿರುವ ಮಂಡಳಿಗಳವತಿಯಿಂದ ಅಸಂಘಟಿತ ಕಾರ್ಮಿಕರಿಗಾಗಿ ಹಲವಾರು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು ಅದರ ವಿವರಗಳು ಈ ಮುಂದಿನಂತಿವೆ:

I. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:–

ಈ ಮಂಡಳಿಯ ಮೂಲಕ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಈ ಕೆಳಕಂಡ ಎರಡು ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

1. ಎನ್.ಪಿ.ಎಸ್ ಲೈಟ್–ಸ್ವಾವಲಂಭನ್ ಪಿಂಚಣಿ ಯೋಜನೆ:–
2. ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ವಾಹನ ಚಾಲಕರ ಅಪಘಾತ ಪರಿಹಾರ ಯೋಜನೆ:–

II. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇನ್ನಿತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:–

ಅಸಂಘಟಿತ ಕಾರ್ಮಿಕರಾದ ಕಟ್ಟಡ ಕಾರ್ಮಿಕರಿಗೆ ಮಂಡಳಿಯಿಂದ 12 ರೀತಿಯ ಸೌಲಭ್ಯಗಳನ್ನು ರೂಪಿಸಲಾಗಿದ್ದು, ಸದರಿ ಸೌಲಭ್ಯಗಳಲ್ಲಿ 8 ಸೌಲಭ್ಯಗಳನ್ನು ಪ್ರಸ್ತುತ ನೀಡಲಾಗುತ್ತಿದ್ದು, ಉಳಿದಂತೆ 4 ಸೌಲಭ್ಯಗಳನ್ನು (ಮಾಸಿಕ ಪಿಂಚಣಿ, ಮನೆ ಕಟ್ಟುವುದಕ್ಕೆ ಧನಸಹಾಯ, ಉಪಕರಣ ಧನಸಹಾಯ, ದುರ್ಬಲತೆ ಮಾಸಿಕ ಪಿಂಚಣಿ) ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ನೋಂದಾಯಿಸಿದ ತಕ್ಷಣ ದೊರೆಯುವ ಸೌಲಭ್ಯಗಳು:

1. ಒಳರೋಗಿ ಧನಸಹಾಯ
2. ಅಪಘಾತ/ದುರ್ಬಲತೆ ಪರಿಹಾರ
3. ಪ್ರಮುಖ ಖಾಯಿಲೆಗಳ ಧನಸಹಾಯ
4. ನೋಂದಯಿತರಲ್ಲದ ಕಾರ್ಮಿಕರಿಗೆ ಅನುಗ್ರಹರಾಶಿ ಪರಿಹಾರ
5. ಅಂತ್ಯ ಕ್ರಿಯೆಗಾಗಿ ಧನಸಹಾಯ & ಅನುಗ್ರಹರಾಶಿ ಪರಿಹಾರ ಧನಸಹಾಯ
6. ದುರ್ಬಲತೆ ಮಾಸಿಕ ಪಿಂಚಣಿ

ನೋಂದಾಯಿಸಿ ಒಂದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯಗಳು:

7. ಹೆರಿಗೆ ಧನಸಹಾಯ
8. ಶೈಕ್ಷಣಿಕ ಧನಸಹಾಯ
9. ಮದುವೆ ಧನಸಹಾಯ

ನೊಂದಾಯಿಸಿ ಎರಡು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ

10. ಉಪಕರಣ ಧನಸಹಾಯ

ನೊಂದಾಯಿಸಿ ಐದು ವರ್ಷ ಪೂರ್ಣಗೊಳಿಸಿದವರಿಗೆ ದೊರೆಯುವ ಸೌಲಭ್ಯ

11. ಮಾಸಿಕ ಪಿಂಚಣಿ ಸೌಲಭ್ಯ

12. ಮನೆ ಕಟ್ಟುವುದಕ್ಕೆ ಧನಸಹಾಯ

III. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ:

ಈ ಯೋಜನೆಯನ್ನು ಬಿಪಿಎಲ್ ಮತ್ತು ಅಸಂಘಟಿತ ವಲಯದ ಕೆಲವು ನಿರ್ದಿಷ್ಟ ಕಾರ್ಮಿಕ ಕುಟುಂಬದವರಿಗೆ ಆರೋಗ್ಯ ವಿಮೆಯನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಯೋಗದಲ್ಲಿ ವಿಮಾ ಕಂಪನಿಗಳ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಪಡೆದ ಪ್ರತಿ ಕುಟುಂಬದ ಗರಿಷ್ಠ 5 ಜನ ಸದಸ್ಯರು ನೋಂದಾಯಿತ ಆಸ್ಪತ್ರೆಗಳಲ್ಲಿ ವಾರ್ಷಿಕ ರೂ.30,000–00 ವರೆಗಿನ ಒಳರೋಗಿ ಚಿಕಿತ್ಸೆಯನ್ನು ಉಚಿತವಾಗಿ ಪಡೆಯಬಹುದಾಗಿರುತ್ತದೆ.

ಆ) "ಎನ್.ಪಿ.ಎಸ್ ಲೈಟ್–ಸ್ವಾವಲಂಬನ್ ಯೋಜನೆಯ ಅನುಷ್ಠಾನದ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪಿ.ಎಫ್.ಆರ್.ಡಿ.ಎ. ನವದೆಹಲಿ, ಈ ಪ್ರಾಧಿಕಾರದ ಬಳಿ **'ಅಗ್ರಿಗೇಟರ್'** ಆಗಿ ನೋಂದಾಯಿಸಲಾಗಿದೆ. ಈ ಪ್ರಾಧಿಕಾರದ ಮಾರ್ಗಸೂಚಿಯನ್ವಯ **"ಎನ್.ಪಿ.ಎಸ್ ಲೈಟ್–ಸ್ವಾವಲಂಬನ್ ಪಿಂಚಣಿ ಯೋಜನೆ"** ಯನ್ನು ಅನುಷ್ಠಾನಗೊಳಿಸಲು ಈಗಾಗಲೇ 3 ಖಾಸಗಿ ಸಂಸ್ಥೆಗಳನ್ನು **"ಫೆಸಿಲಿಟೇಟರ್"** ನೇಮಕ ಮಾಡಿಕೊಳ್ಳಲಾಗಿದೆ. ಈ

ಫೆಸಿಲಿಟೇಟರ್ ಸಂಸ್ಥೆಗಳ ಮೂಲಕ ಎನ್.ಪಿ.ಎಸ್.ಲೈಟ್ ಸ್ವಾವಲಂಬನ್ ಯೋಜನೆಯಡಿಯಲ್ಲಿ ನೋಂದಣಿ ಕಾರ್ಯವನ್ನು ಮಾಡಿಸಲಾಗುತ್ತಿದೆ.

ಇ) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಎನ್.ಪಿ.ಎಸ್.ಲೈಟ್ ಸ್ವಾವಲಂಬನ್ ಯೋಜನೆಯನ್ನು ಅನುಷ್ಠಾನಗೊಳಿಸಲು ನೇಮಕ ಮಾಡಿಕೊಂಡಿರುವ ಮೂರು ಫೆಸಿಲಿಟೇಟರ್ ಸಂಸ್ಥೆಗಳ ವಿವರಗಳು ಈ ಕೆಳಗಿನಂತಿವೆ.

1. ಅಲಂಕಿತ್ ಅಸೈನ್‌ಮೆಂಟ್ ಲಿ., ನವದೆಹಲಿ

   (Alankit Assignment Ltd, New Delhi)

2. ವೇ 2 ವೆಲ್ತ್ ಬ್ರೋಕರ್ಸ್ ಲಿ.,

   (Way 2 Wealth Brokers Ltd.,)

3. ಐಎಲ್&ಎಫ್ಎಸ್ ಸೆಕ್ಯೂರಿಟಿ ಸರ್ವಿಸಸ್

   (IL&FS Securities Services)

ಈ) ಎನ್.ಪಿ.ಎಸ್.ಲೈಟ್ ಸ್ವಾವಲಂಬನ್ ಯೋಜನೆಯನ್ನು ಅನುಷ್ಠಾನಗೊಳಿಸಲು ಫೆಸಿಲಿಟೇಟರ್ ಸಂಸ್ಥೆಗಳನ್ನು ನೇಮಕ ಮಾಡಿಕೊಂಡಿದ್ದು, ಹಾಗೆ ನೇಮಕ ಹೊಂದಲು ಸದರಿ ಸಂಸ್ಥೆಗಳು ಸಹ ಪಿ.ಎಫ್.ಆರ್.ಡಿ.ಎ. ಬಳಿ ಅಗ್ರಿಗೇಟರ್ ಆಗಿ ನೋಂದಣಿಯಾಗಿರಬೇಕು. ಅಗ್ರಿಗೇಟರ್ ಆಗಿಲ್ಲದ ಸಂಸ್ಥೆಗಳು ಸಹಾ ಫೆಸಿಲಿಟೇಟರ್ ಆಗಿ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದಾಗಿದ್ದು, ಅಂತಹ ಸಂಸ್ಥೆಗಳು ಈ ಕೆಳಕಂಡ ಷರತ್ತುಗಳನ್ನು ಕಡ್ಡಾಯವಾಗಿ ಪೂರೈಸಬೇಕಾಗುತ್ತದೆ.

1. ಸದರಿ ಸಂಸ್ಥೆಯು ರೂ.5 ಲಕ್ಷ ಬ್ಯಾಂಕ್ ಗ್ಯಾರಂಟಿ ನೀಡಬೇಕು.
2. ನೋಂದಣಿಯನ್ನು ಸುಗಮವಾಗಿ ನಿರ್ವಹಿಸಲು ಎಲ್ಲಾ ಜಿಲ್ಲೆಗಳಲ್ಲಿ ಕಛೇರಿ ಮತ್ತು ಸಿಬ್ಬಂದಿಯನ್ನು ಹೊಂದಿರಬೇಕು.

3. ಸಂಸ್ಥೆಯು ಆರ್ಥಿಕ ದೃಢತೆಯನ್ನು ಹೊಂದಿರಬೇಕು. ಇದನ್ನು ಪುಷ್ಟೀಕರಿಸಲು ಕನಿಷ್ಠ 2 ವರ್ಷಗಳ ಬ್ಯಾಂಕ್ ಸ್ಟೇಟ್‌ಮೆಂಟ್ ಮತ್ತು ಆದಾಯ ತೆರಿಗೆ ನಿರ್ಧರಣೆ ಆದೇಶಗಳನ್ನು ನೀಡಬೇಕು.

ಈ ಯೋಜನೆಯ ಬಗ್ಗೆ ಅರಿವು ಮೂಡಿಸಲು ಫೆಸಿಲಿಟೇಟರ್ ಸಂಸ್ಥೆಗಳಿಗೆ ಮಂಡಳಿಯ ವತಿಯಿಂದ ಯಾವುದೇ ಗೌರವಧನ ಇತ್ಯಾದಿ ನೀಡುತ್ತಿಲ್ಲ. ಬದಲಾಗಿ ವಾರ್ಷಿಕ ಕನಿಷ್ಠ ರೂ.1,000/– ವಂತಿಕೆ ಪಾವತಿಸಿದ ನೋಂದಣಿದಾರರ ಸಂಖ್ಯೆಯ ಆಧಾರದ ಮೇಲೆ ತಲಾ ರೂ.100/–ರಂತೆ ಕೇಂದ್ರ ಸರ್ಕಾರದ ಪಿ.ಎಫ್.ಆರ್.ಡಿ.ಎ. ಸಂಸ್ಥೆಯಿಂದ ಫೆಸಿಲಿಟೇಟರ್ ಸಂಸ್ಥೆಗಳಿಗೆ ಗೌರವಧನ ಪಾವತಿಸಲಾಗುತ್ತದೆ.

ಊ) ಎನ್.ಪಿ.ಎಸ್. ಲೈಟ್ ಸ್ವಾವಲಂಬನ್ ಯೋಜನೆಯಡಿ ಫೆಸಿಲಿಟೇಟರ್ ಸಂಸ್ಥೆಗಳ ಮೂಲಕವೇ ನೋಂದಣಿಯನ್ನು ಮಾಡಲಾಗುತ್ತಿದೆ. ರಾಜ್ಯದಲ್ಲಿ ಮಾರ್ಚ್–2015ರ ಮಾಹೆಯ ಅಂತ್ಯಕ್ಕೆ ಮಂಡಳಿಯ ಎಲ್ಲಾ ಫೆಸಿಲಿಟೇಟರ್ ಸಂಸ್ಥೆಗಳು ಸೇರಿ ಒಟ್ಟು 50654 ವಂತಿಕೆದಾರರನ್ನು ನೋಂದಾಯಿಸಿರುತ್ತಾರೆ.

ಫೆಸಿಲಿಟೇಟರ್–ವಾರು ನೋಂದಾಯಿಸಲ್ಪಟ್ಟ ವಂತಿಕೆದಾರರ ಪಟ್ಟಿ ಈ ಕೆಳಗಿನಂತಿದೆ.

ಕ್ರ.ಸಂ.	ಫೆಸಿಲಿಟೇಟರ್ ಹೆಸರು	ನೋಂದಾಯಿಸಿದ ವಂತಿಕೆದಾರರ ಸಂಖ್ಯೆ	ಷರಾ
1	ಕ್ಯಾಂಪ್ಸ್	7710	ಒಪ್ಪಂದವು ದಿ:28–12–13 ಕ್ಕೆ ಅಂತ್ಯಗೊಂಡಿದೆ.
2	ಐಎಫ್‌ಎಂಆರ್	3629	ಒಪ್ಪಂದವು ದಿ:11–04–15 ಕ್ಕೆ ಅಂತ್ಯಗೊಂಡಿದೆ.

3	ಐಐಎಮ್‌ಪಿಎಸ್	286	ಒಪ್ಪಂದವು ದಿ:11-04-15 ಕ್ಕೆ ಅಂತ್ಯಗೊಂಡಿದೆ
4	ಅಲಂಕಿತ್	18236	
5	ಐಫಎಲ್&ಎಫ್‌ಎಸ್	11983	
6	ವೇ 2 ವೆಲ್ತ್	8810	
ಒಟ್ಟು		**50654**	

ಎತ್ತಿನಹೊಳೆ ಯೋಜನೆ

1009(799); ಶ್ರೀ ಮಂಜುನಾಥಗೌಡ ಕೆ.ಎಸ್. (ಮಾಲೂರು)

ಅ) ಕೋಲಾರ ಜಿಲ್ಲೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು (ವರ್ಷವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

ಆ) ಕೋಲಾರ ಜಿಲ್ಲೆಗೆ ಕುಡಿಯುವ ನೀರು ಪೂರೈಸುವ ಸಲುವಾಗಿ ಕೈಗೆತ್ತಿಕೊಳ್ಳಲಾಗಿರುವ ಎತ್ತಿನ ಹೊಳೆ ಯೋಜನೆಗೆ ಸರ್ಕಾರ ನಿಗದಿಪಡಿಸಿರುವ ಅನುದಾನವೆಷ್ಟು (ವಿವರಗಳನ್ನು ನೀಡುವುದು)

ಇ) ಈ ಯೋಜನೆಯು ಯಾವ ಹಂತದಲ್ಲಿದೆ; ಈ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ: ಹಾಗಿದ್ದಲ್ಲಿ ಸಂಪೂರ್ಣ ವಿವರಗಳನ್ನು ನೀಡುವುದು?